ಫಾರೆಸ್ಟ್ ಇಲಾಖಾ.

ಇ ಸ್ತಿ ಹಾ ರ್ ನಾ ಮೆ .

ತಾರೀಖು 21ನೇ ಡಿಕಂಬರ್ 1886.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಉತ್ಪತ್ತಿಯಾದ ಬಾಬತು, ಯಿದರಡಿಲಿ ಕಂಡ ಚೌಜೀನೆಗಳನ್ನು ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಫಾರೆಸ್ಟ್ ಅಸ್ಸಿಸ್ಟೆಂಟ್ ಕಂಸರ್ವೇಟರ್ ಸಾಹೇಬರವರಿಂದ ಪಬ್ಲಿಕ್ ಹರಾಜ್ ಮೂಲಕ ವಿಕ್ರಯ ಮಾಡಲ್ಪಡುವದು.

ಹರಾಜ್ ನಡಿಯತಕ್ಕ ಸ್ಥಳ ದಹೆಸರು.	ಹರಾಜು ತಾರೀಖು.	ಸಾಗವಾನಿ ನಾಟಾಗಳು.	ಕಾಡಜಾತಿ ನಾಟಾಗಳು.	ಸಾಗವಾನಿ ಮತ್ತು ಕಾಡಜಾತಿ ಬೆಲಗಗಳು.	ಪರಾ.
ಕಿರಾಳಕೊಪ್ಪ	15ನೇ ಜನವರೀ 1887	..	80	120	ಹರಾಜ್ ಕಾಲದಲ್ಲಿ ಸರಿಯಾದ ರೇಟು ಕಿಟ್ಟದವರಿಗೆ ಹರಾಜ್ ಕೊಡಲ್ಪಡುವದಿಲ್ಲವೆಂಬ ನಾಮೂಗಳನ್ನು ಹಾಸಿ
ತೀರ್ಥಪುರ ಡಿಪೊ	18ನೇ ಡಿಟೋ 1887	..	40	210	
ತರಿಕೆರೆ ಡಿಪೊ	25ನೇ ಡಿಟೋ 1887	50	20	1000	
ಲಕ್ಕವಳ್ಳಿ ಡಿಪೊ	1ನೇ ಫಿಬ್ರವರೀ 1887	650	650	2000	
ಕಣಬೂರ್ ಡಿಪೊ ತಾಲ್ಲೂಕು ಕೊಪ್ಪಾ	5ನೇ ಫಿಬ್ರವರೀ 1887	500	200	30	
ಆಯನೂರು ಡಿಪೊ ಶಿವಮೊಗ್ಗಾ ತಾಲ್ಲೂಕು	15ನೇ ಡಿಟೋ 1887	100	..	..	

ಹರಾಜಿನ ಷರತುಗಳು—ಮೈಸೂರು ಗೆಜಟ್ಟಿನಲ್ಲಿ 1873ನೇ ಇಸವಿ ಜೂ 2ನೇ ಮತ್ತು ನಂಬರು 20ನೇ ಯಿಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಯಿರತಕ್ಕದ್ದು. ಮತ್ತು ಹರಾಜಕಾಲದಲ್ಲಿ ವೋದಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1886ನೇ ಇಸವಿ ಮಿಸಲೇನಿಯಸ್ ನಂಬರ್ 916.

ಅರ್ಜೀದಾರ್ ಬೆಂಗಳೂರು ಕಲಾಸಿಪಾಳ್ಯದಲ್ಲಿ ಯಿರುವ ಕಂ | ಪ್ರತಿವಾದಿ ಬೆಂಗಳೂರು ಕಲಾಸಿಪಾಳ್ಯದಲ್ಲಿ ಯಿರುವ ಕಂಜಿ
ಜಿಲೇಟು ಆದಿ ನಾರಾಯಣಸಾಮಿನಾಯಡರ ಹೆಂಡತಿ ತಾಯೋ | ಮುತ್ತಸಾಮಿನಾಯಡರ ಮಗ ಮುನಿಸಾಮಿನಾಯಡ.
ರಂವು.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೇಲ್ಕಂಡ ಮೊಕದ್ದಮೆಯಲ್ಲಿ ಅರ್ಜೀದಾರಳು ಮೆನಲ್ ಜಾನ ಕೇಶವಲ್‌ನಾಯಡುರ ಜಿಂದಗಿಗೆ ತಂನನ್ನ ಮ್ಯಾನೇಜರಾಗಿ ನೇಮಿಸಿ ಸ್ವಾಧೀನಕ್ಕೆ ಕೊಡಿಸಬೇಕೆಂದು ಅಪ್ಲಿಕೇಷ್ಟ ಕೊಟ್ಟು ಯಿರುತ್ತಾಳೆ, ಇದರ ಮೇಲೆ ಯಾವ ಆಕ್ಷೇಪಣೆಯಿದ್ದಾಗ್ಯೂ 1887ನೇ ಇಸವಿ ಜನವರೀ 28ನೇ ತಾರೀಖಿಗೆ ಹಯರಿಂಗು ಯಿಟ್ಟದೆ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಿ ತಿಳಿಸಬೇಕು.